






**ಚಟುವಟಿಕೆ 4: ನಮ್ಮ ಸುತ್ತಮುತ್ತಲೂ ಕಂಡುಕೊಂಡಂತಹ ವಸ್ತುಗಳೊಂದಿಗೆ ಬಣ್ಣಗಳನ್ನು ಅನ್ವೇಷಣೆ ಮಾಡುವುದು.**

**ವಯಸ್ಸು:** 6 ವರ್ಷ ಮತ್ತು ಮೇಲ್ಪಟ್ಟವರು
**ವಸ್ತುಗಳು:**
ಚಿಕ್ಕ ಕಲ್ಲುಗಳು, ಎಲೆಗಳು, ಹುಲ್ಲು, ಹೂವುಗಳು, ಮರಳು, ಬೀಜಗಳು, ತ್ಯಾಜ್ಯ ತರಕಾರಿಗಳು, ಬಣ್ಣಬಣ್ಣದ ತ್ಯಾಜ್ಯದ ಕಾಗದಗಳು ಇತ್ಯಾದಿ.

**ಹಂತ 1: ನಿಮ್ಮ ಮನೆಯ ಸುತ್ತಲೂ ವಿವಿಧ ಬಣ್ಣಗಳನ್ನು ಮಾಡಲು ಬಳಸಬಹುದಾದ ವಿವಿಧ ವಸ್ತುಗಳನ್ನು ಹುಡುಕಿ ಮತ್ತು ಸೂಕ್ಷ್ಮವಾಗಿ ಗಮನಿಸಿ.**

**ನೆನಪಿನಲ್ಲಿಡಬೇಕಾದ ಅಂಶಗಳು:**

1. ನಿಮ್ಮೊಂದಿಗೆ ಚಟುವಟಿಕೆಯನ್ನು ಮಾಡಲು ಇಚ್ಛಿಸುವ ಕುಟುಂಬದ ಸದಸ್ಯರನ್ನು ಅಥವಾ ಸ್ನೇಹಿತರನ್ನು ಆಯ್ಕೆಮಾಡಿಕೊಳ್ಳಿ.
2. ಆಯ್ಕೆಮಾಡಿಕೊಂಡ ಸದಸ್ಯರಿಗೆ ಅದೇ ಚಟುವಟಿಕೆಯನ್ನು ಸ್ವತಂತ್ರವಾಗಿ ಮಾಡಲು ಹೇಳಿ.
3. ನಿಮ್ಮ ಮನೆಯ ಸುತ್ತಲೂ ಇರುವ ವಸ್ತುಗಳನ್ನು ನೋಡಿ ಪರಿಶೀಲಿಸಿ ಯಾವೆಲ್ಲಾ ವಸ್ತುಗಳಿಂದ ಬಣ್ಣಗಳನ್ನು ಹೊರತೆಗೆಯಬಹುದು ಎಂಬುದನ್ನು ಆಲೋಚಿಸಿ.
4. ಕನಿಷ್ಠ 5 ವಿಭಿನ್ನ ವಸ್ತುಗಳನ್ನು ಹುಡುಕಿ ಮತ್ತು ಅವುಗಳನ್ನು ಸಂಗ್ರಹಿಸಿ.

5. ಈಗ ನೀವು ಹುಡುಕಿದ ಎಲ್ಲಾ ವಸ್ತುಗಳ ಫೋಟೋ ತೆಗೆದುಕೊಂಡು ಅವುಗಳ ಮೂಲ ಬಣ್ಣಗಳನ್ನು ಬರೆಯಿರಿ.
6. ಈ ವಸ್ತುಗಳಿಂದ ಬಣ್ಣಗಳನ್ನು ಹೊರಹಾಕಲು ಇರುವ ವಿಭಿನ್ನ ವಿಧಾನಗಳನ್ನು ಯೋಚಿಸಿ. ಉದಾಹರಣೆಗೆ: ಪುಡಿ ಮಾಡುವುದು, ರುಬ್ಬುವುದು, ಕರಗಿಸುವುದು, ನೆನೆಸುವುದು, ವಸ್ತುಗಳನ್ನು ಮಿಶ್ರಣ ಮಾಡುವುದು ಇತ್ಯಾದಿ.
7. ಈ ಪ್ರತಿಯೊಂದು ವಸ್ತುಗಳಿಂದ ವಿಭಿನ್ನ ರೀತಿಗಳಲ್ಲಿ ನೈಸರ್ಗಿಕ ಬಣ್ಣವನ್ನು ಪಡೆಯಲು ಪ್ರಯತ್ನಿಸಿ. ಎಲೆಯನ್ನು ಪುಡಿಮಾಡಿದಾಗ ನಾನು ಯಾವ ಬಣ್ಣವನ್ನು ಪಡೆಯುತ್ತೇನೆ, ಎಲೆಯ ಒರಟು ಮೇಲ್ಮೈಯನ್ನು ಉಜ್ಜಿದರೆ ಯಾವ ಬಣ್ಣ ಸಿಗುತ್ತದೆ? ನೀರಿನಲ್ಲಿ ಹಾಕಿದರೆ ಏನಾಗುತ್ತದೆ? ವಸ್ತುಗಳಿಂದ ಬಣ್ಣವನ್ನು ಪಡೆಯಲು ಇರುವ ವಿವಿಧ ವಿಧಾನಗಳನ್ನು ಪ್ರಯತ್ನಿಸಿ.
8. ಕನಿಷ್ಠ 2 ರಿಂದ 3 ವಿಭಿನ್ನ ವಿಧಾನಗಳನ್ನು ಬಳಸಿಕೊಂಡು ಬಣ್ಣಗಳನ್ನು ಪಡೆಯಲು ಪ್ರಯತ್ನಿಸಿ.
9. ಮೂಲವಸ್ತುಗಳ ಬಣ್ಣಕ್ಕೂ ಹಾಗೂ ನೀವು ಬಣ್ಣವನ್ನು ತೆಗೆಯಲು ಮಾಡಿದ ವಿವಿಧ ಪ್ರಯತ್ನಗಳ ನಂತರ ಇರುವ ವಸ್ತುಗಳ ಬಣ್ಣಕ್ಕೂ ವ್ಯತ್ಯಾಸವನ್ನು ಗಮನಿಸಿ ಬರೆಯಿರಿ.
10. ನಿಮ್ಮ ಟಿಪ್ಪಣಿಗಳೊಂದಿಗೆ ನೀವು ಮಾಡಿದ ಎಲ್ಲಾ ಪರಿಶೋಧನೆಯ ಫೋಟೋಗಳನ್ನು ತೆಗೆದುಕೊಳ್ಳಿ.

## ಈ ಚಟುವಟಿಕೆಯನ್ನು ಮಾಡಲು ಕುಟುಂಬದ ಸದಸ್ಯರು/ ಸ್ನೇಹಿತರು ಸಿಕ್ಕರೆ:

1. ನೀವಿಬ್ಬರೂ ಸಂಗ್ರಹಿಸಿದ ಎಲ್ಲಾ ವಸ್ತುಗಳು ಮತ್ತು ನೀವು ಅನ್ವೇಷಿಸಿದ ಬಣ್ಣಗಳನ್ನು ಹಂಚಿಕೊಳ್ಳಿ.
2. ನೀವು ಅನ್ವೇಷಿಸಿದ ಒಂದು ಅಥವಾ ಎರಡು ಬಣ್ಣಗಳನ್ನು ಆರಿಸಿ, ಯಾವ ವಸ್ತುವಿನಿಂದ ಆ ಬಣ್ಣವನ್ನು ರಚಿಸಲಾಯಿತು ಮತ್ತು ಅದನ್ನು ಪಡೆಯಲು ಏನು ಮಾಡಿರಬಹುದು ಎಂದು ನಿಮ್ಮ ಜೊತೆಗಾರರು ಊಹಿಸಲಿ.
3. ನಿಮ್ಮ ಜೊತೆಗಾರರು ಅನ್ವೇಷಿಸಿದ ಒಂದು ಅಥವಾ ಎರಡು ಬಣ್ಣಗಳನ್ನು ನಿಮಗೆ ತೋರಿಸಲಿ, ಆ ಬಣ್ಣವನ್ನು ತರಿಸಲು ಅವರು ಬಳಸಿದ ವಸ್ತುವನ್ನು ಮತ್ತು ವಿಧಾನವನ್ನು ನೀವು ಊಹಿಸಬಹುದು.

## ಚಟುವಟಿಕೆಯ ಭಾಗಿದಾರರ ಜೊತೆ ಮಾಡಬೇಕಾದ ಅಂಶಗಳು:

1. ನೀವಿಬ್ಬರೂ ಪ್ರಯತ್ನಿಸಿದ ನಂತರ, ನಿಮ್ಮ ಅನ್ವೇಷಣೆಗಳನ್ನು ಪರಸ್ಪರ ಹಂಚಿಕೊಳ್ಳಿ ಮತ್ತು ನಿರ್ದಿಷ್ಟ ವಸ್ತುಗಳಿಂದ ನೀವು ಬಣ್ಣಗಳನ್ನು ಹೇಗೆ ಪಡೆದುಕೊಂಡಿದ್ದೀರಿ ಎಂಬ ಪ್ರಕ್ರಿಯೆಯನ್ನು ಹಂಚಿಕೊಳ್ಳಿ.
2. ನೀವು ಬಯಸಿದರೆ, ನೀವು ಮತ್ತು ನಿಮ್ಮ ಕುಟುಂಬ ಸದಸ್ಯರು/ ಸ್ನೇಹಿತರು ಅನ್ವೇಷಿಸಿದ ಎಲ್ಲಾ ಬಣ್ಣಗಳನ್ನು ತಂದು, ಅವುಗಳನ್ನು ಮಿಶ್ರಣ ಮಾಡಿದರೆ ಬೇರೆ ಬಣ್ಣ ಅಥವಾ ಯಾವುದಾದರೊಂದು ಹೊಸಬಣ್ಣ ಬರುತ್ತದೆಯೇ ಎಂದು ಪರಿಶೀಲಿಸಬಹುದು.

ARTSPARKS
CURIOSITY. CREATIVITY. LEARNING.

*ArtSparks Foundation*

*www.art-sparks.org*